**ಅಸಲು ದಾವಾ ನಂಃ 48 /2019**
**ಡಿ.ಡಬ್ಲ್ಯೂಃ 1,**

ದಿನಾಂಕ :24-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ವಾದಿ ಪರ ವಕೀಲರಿಂದ :

ನನ್ನ ತಂದೆ ಸೈದಪ್ಪಾ ಈಗ ಆರೋಗ್ಯವಂತರಾಗಿದ್ದಾರೆ ಮತ್ತು ನಡೆದಾಡುತ್ತಾರೆ. 1 ನೇ ಪ್ರತಿವಾದಿಗೆ ಅಣ್ಣ ಇದ್ದಾನೆ. ಸೈದಪ್ಪ ಇವರ ಅಣ್ಣ ಯಾವುದೇ ಮಕ್ಕಳು ಇಲ್ಲದೇ 1972 ರಲ್ಲಿ ತೀರಿಹೋಗಿದ್ದಾರೆ ಎಂದರೆ ಸರಿ. ಸೈದಪ್ಪ ಮತ್ತು ನಾಗಪ್ಪ ಇವರ ತಂದೆ ಗುಂಡಪ್ಪ ಇವರು 1998 ರಲ್ಲಿ ತೀರಿಹೋಗಿದ್ದಾರೆ ಎಂದರೆ ಸರಿ. ಪ್ರಾ.ಸಾ-2, ಪ್ರತಿವಾದಿ ನಂ-1 ರವರ ಸಹೋದರಿಯ ಗಂಡ ಎಂದರೆ ಸರಿ. ಪ್ರಾ.ಸಾ-3 ಪ್ರಭು ಪ್ರತಿವಾದಿ ನಂ-1 ರವರ ಸಹೋದರಿಯ ಮಗ ಎಂದರೆ ಸರಿ.

1 ನೇ ಪ್ರತಿವಾದಿಯ ಮದುವೆ ಮಹಾದೇವಿ ಇವರ ಜೊತೆಗೆ ಕಾಳೇಶ್ವರ ದೇವಸ್ಥಾನದಲ್ಲಿ ಮಹಾದೇವಿ 10 ವರ್ಷ ಇದ್ದಾಗ ಮದುವೆ ಆಗಿದೆ ಎಂದರೆ ಸರಿಯಲ್ಲ. ವಾದಿಯರು ಸೈದಪ್ಪ ಮತ್ತು ಮಹಾದೇವಿ ಇವರ ಮಕ್ಕಳು ಎಂದರೆ ಸರಿ. ಸೈದಪ್ಪ ಮತ್ತು ಮಹಾದೇವಿ ಇವರಿಗೆ 7 ಜನ ಮಕ್ಕಳು ಈಗ 4 ಜನ ಜೀವಂತ ಇದ್ದಾರೆ ಎಂದರೆ ಗೊತ್ತಿಲ್ಲಾ. ಸೈದಪ್ಪ ಇವರಿಗೆ ಮಹಾದೇವಿ ಇಂದ ಹುಟ್ಟಿದ ಗಂಡು ಮಕ್ಕಲು ಯಾವುದೇ ಬದುಕಿಲ್ಲಾ ಕಾರಣ ಅವರು 2 ಮದುವೆ ನಾಗಮ್ಮ ಇವರ ಜೊತೆ ಮಾಡಿಕೊಂಡರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸೈದಪ್ಪ ಮತ್ತು ನಾಗಮ್ಮನಿಗೆ ಪ್ರತಿವಾದಿ ನಂ-2 ರಿಂದ 6 ಮಕ್ಕಳು ಎಂದರೆ ಸರಿ.

ದಾವಾ ಆಸ್ತಿ ಸರ್ವೆ ನಂ: 21/2, 22/2, 514, 746/1, 746/4 ಆಸ್ತಿಗಳು ಹಿರಿಯರ ಆಸ್ತಿಗಳೂ ಎಂದರೆ ಸರಿ, ಅವು ಈಗಲೂ 1 ನೇ ಪ್ರತಿವಾದಿಯ ಹಸರಿನಲ್ಲಿ ಇದೆ ಎಂದರೆ ಸರಿ. ಈ 5 ಆಸ್ತಿಗಳು 1 ನೇ ಪ್ರತಿವಾದಿ ಹೆಸರಿಗೆ ಆಗುವದಕ್ಕಿಂತ ಮುಂಚೆ ಆತನ ತಂದೆ ಹಸರಿನಲ್ಲಿದ್ದವು ಎಂದರೆ ಸರಿ. ಸ.ನ. 31/2, 502, ನಮ್ಮ ಅಜ್ಜ ಗುಂಡಪ್ಪ ಇವರು ಜೀವಂತ ಇರುವಾಗ ಹಿರಿಯರ ಆಸ್ತಿ ಆದಾಯದಿಂದ ನಾಗಪ್ಪ ಹೆಸರಿನಲ್ಲಿ ಖರಿದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ದೊಡ್ಡಪ್ಪ ನಾಗಪ್ಪ ಸ್ವಂತ ಗಳಿಕೆಯಿಂದ

ಖರಿಸಿದ್ದಾರೆ ಎಂದು ನುಡಿಯುತ್ತಾರೆ. ಸ.ನ. 31/2, 502, ಗಳು ನಾಗಪ್ಪ ತೀರಿ ಹೋದ ನಂತರ 1 ನೇ ಪ್ರತಿವಾದಿ ಹೆಸರಿನಲ್ಲಿವೆ ಎಂದರೆ ಸಾಕ್ಷಿ ನನ್ನ ತಮ್ಮ ಬೀರಪ್ಪ 3 ನೇ ಪ್ರತಿವಾದಿ ಹೆಸರಿನಲ್ಲಿವೆ ಎಂದು ನುಡಿಯತ್ತಾರೆ. ಸದರಿ ನಾಗಪ್ಪ ಇವರು ನಮ್ಮ ಹತ್ತಿರ ಇದ್ದ ಕಾರಣ ಅವರು ಅವರ ಹೆಸರಿನಲ್ಲಿರುವ ಕಾರಣ 3 ನೇ ಪ್ರತಿವಾದಿ ಹೆಸರಿಗೆ ಮಾಡು ಅಂತಾ ಹೇಳಿದ ಕಾರಣ ಆತನ ಹೆಸರಿಗೆ ಮಾಡಿದ್ದಾರೆ. ನಾಗಪ್ಪ ಮೃತ ಕಾಲಕ್ಕೆ ಆತನ ತಂದೆ ಗಂಡಪ್ಪ ಜೀವಂತ ಇದ್ದರು. ನನ್ನ ಅಜ್ಜ ತೀರಿ ಹೋದಾಗ ನನಗೆ 10 ವರ್ಷ.

ನಮ್ಮ ಅಜ್ಜ ತಮ್ಮ ಜೀವಿತ ಅವಧಿಯಲ್ಲಿ ನನ್ನ ತಂದೆ ಮೊದಲನೇ ಹೆಂಡತಿ ಮಹಾದೇವಿ ಮದುವೆ ಅದ ನಂತರ ಅವರು ಜೀವಂತ ಇರುವಾಗ 2 ನೇ ಮದುವೆ ನಾಗಮ್ಮ ಇವರ ಜೊತೆ ಮಾಡಿಕೊಂಡ ಕಾರಣಕ್ಕೆ ಮತ್ತು ಮೊದಲನೆ ಹೆಂಡತಿ ಮಹಾದೇವಿ ಸರಿಯಾಗಿ ನೋಡಿಕೊಳ್ಳದ ಕಾರಣ ನಮ್ಮ ಅಜ್ಜ ಗುಂಡಪ್ಪ ಇವರು ಮಹಾದೇವಿ ಇವರಿಗೆ ಸರ್ವೆ ನಂ: 21/1, 22/2 , 514 ಇವುಗಳನ್ನು ಜೀವನಾಂಶ ರೂಪಕವಾಗಿ ನೀಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲಾ. ಈ ದಾವೆ ಹೂಡುವಾಗ ಈ ಸರ್ವೆ ನಂಬರಗಳು ಮಹಾದೇವಿ ಹೆಸರಿನಲ್ಲಿವೆ ಎಂದರೆ ಸರಿ.

ನಾಗಮ್ಮ ಇವಳು 1 ನೇ ಪ್ರತಿವಾದಿ ಮೊದಲನೇ ಹೆಂಡತಿ ನಾಗಮ್ಮನಿಗೆ ಮಕ್ಕಳು ಆಗದ ಕಾರಣ ಆತನು 2 ನೇ ಮದುವೆ ಮಹಾದೇವಿ ಜೊತೆಗೆ ಆಗಿ ನಂತರ ಮಹಾದೇವಿ ಮಕ್ಕಳು ಆದ ನಂತರ ಪ್ರತಿವಾದಿ ನಂ-2 ರಿಂದ 6 ಜನಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಾಗಮ್ಮನ ಜೊತೆಗೆ ಯಾವ ದಿನಾಂಕ, ತಿಂಗಳು ಮದುವೆ ಆಗಿದೆ ಎಂದು ಗೊತ್ತಿಲ್ಲಾ.

ಸ.ನ. 32/1 ಮತ್ತು 502 ಈ ಆಸ್ತಿಗಳು ನಾಗಪ್ಪನ ಸ್ವಂತ ಆಸ್ತಿ ಆಗಿದ್ದು ಆತ ಪ್ರತಿ ಮತ್ತು ವಿಶ್ವಾಸದ ಮೇರೆಗೆ 3 ನೇ ಪ್ರತಿವಾದಿ ಹೆಸರಿನಲ್ಲಿ ವರ್ಗಾವಣೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ನಾವು ಎಲ್ಲರೂ ಕೂಡಿ ವಾದಿಯರಿಗೆ ಪಾಲು ನಿರಾಕರಿಸಿದ ಕಾರಣ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ . ವಾದಿಯರು 1 ನೇ ಪ್ರತಿವಾದಿಯ

ಮಕ್ಕಳು ಅವರಿಗೆ ದಾವೆ ಹೂಡಲು ಬರುವುದಿಲ್ಲಾ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹಾದೇವಿ ಇವರು 1 ನೇ ಪ್ರತಿವಾದಿಯ ಕಾನೂನಾತ್ಮಕ ಮೊದಲನೇ ಹಂಡತಿ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬಾರದೆಂಬ ದುರಾಸೆಯಿಂದ ಅವರು 1 ನೇ ಪ್ರತಿವಾದಿಯ 2 ನೇ ಹೆಂಡತಿ ಮಕ್ಕಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.